RNU AIR DHARWAD

# JUNE 24, 2024

## AKASHAVANI - DHARWAD

## PRADESH SAMACHARA (KANNADA) 7:05 AM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ಇಸ್ರೋ ನಿರ್ಮಿತ, ಮರುಬಳಕೆ ಉಡ್ಡಯನ ವಾಹಕ, ‘ಪು ್ಪಕ್’ ಲ್ಯಾಂಡಿಂಗ್ ಪರೀಕ್ಷೆ ಯಶಸ್ವಿ.**
- **ಸಾರ್ವಜನಿಕ ಹಿತದೃಷ್ಟಿಯಿಂದ, ಸಂಚಾರ ನಿಯಮ ಪಾಲನೆ ಆದ್ಯತೆಯಾಗಬೇಕು – ರಾಜ್ಯಪಾಲ ಥಾವರಚಂದ್ ಗೆಹ್ಲೋಟ್.**
- **ಸಮುದ್ರವನ್ನು ಅರಿಯುವುದರಿಂದ, ಪರಿಸರದ ಏರಿಳಿತಗಳು ತಿಳಿಯುವವು – ಕಡಲ ತಜ್ಞ ಪ್ರಕಾಶ್ ಮೇಸ್ತಾ.**
- **18ನೇ ಲೋಕಸಭೆಯ ಮೊದಲ ಅಧಿವೇಶನ, ಇಂದಿನಿಂದ ಆರಂಭ; 27ರಂದು ಉಭಯ ಸದನಗಳನ್ನುದ್ದೇಶಿಸಿ, ರಾಷ್ಟ್ರಪತಿ ಭಾಷಣ.**

<><><>

**ಈಗ ವಾರ್ತೆಗಳ ವಿವರ**

<><><>

**ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ - ಇಸ್ರೋ ಸಿದ್ಧಪಡಿಸಿರುವ ಮರುಬಳಕೆ ಉಡ್ಡಯನ ವಾಹಕ ‘ಪು ್ಪಕ್’ ಲ್ಯಾಂಡಿಂಗ್ ಪರೀಕ್ಷೆ ಯಶಸ್ವಿಯಾಗಿದೆ. ಚಿತ್ರದುರ್ಗದ ಚಳ್ಳಕೆರೆಯಲ್ಲಿರುವ ಇಸ್ರೋ ಎ.ಟಿ.ಆರ್. ಕೇಂದ್ರದಲ್ಲಿ ಭಾನುವಾರ ಬೆಳಗ್ಗೆ ಪು ್ಪಕ್ ಮರು ಬಳಕೆ ವಾಹನ ಯಶಸ್ವಿಯಾಗಿ, ಧರೆಗಿಳಿದಿದೆ. ಭೂಮಿಯಿಂದ ನಾಲ್ಕೂವರೆ ಕಿಲೋಮೀಟರ್ ಎತ್ತರದಲ್ಲಿ, ಭಾರತೀಯ ವಾಯುಪಡೆಯ ಚಿನೋಖ್ ಹೆಲಿಕಾಪ್ಟರ್‌ನಿಂದ ಹೊರಬಂದ, ಪು ್ಪಕ್ ಉಡ್ಡಯನ ವಾಹಕ, ನಿಖರ ಸಮಯಕ್ಕೆ ಸರಿಯಾಗಿ ಪೂರ್ವ ನಿಗದಿತ ಪ್ರದೇಶದಲ್ಲಿ ಇಳಿದು, ಸೂಚಿತ ಜಾಗೆಯಲ್ಲಿ ನಿಲುಗಡೆಗೊಂಡಿತು. ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದಲ್ಲಿ ಇಸ್ರೋ ಆತ್ಮನಿರ್ಭರತೆಯಲ್ಲಿ, ಮತ್ತೊಂದು ಮೈಲುಗಲ್ಲು ಸಾಧಿಸಿದಂತಾಗಿದೆ.**

<><><>

ಅಪರಾಧ ನ್ಯಾಯ ವ್ಯವಸ್ಥೆ: ಆಡಳಿತದಲ್ಲಿ, ಭಾರತದ ಪ್ರಗತಿಪರ ಪಥದ ಕುರಿತು, ಚೆನ್ನೈನಲ್ಲಿ ಆಯೋಜಿತ ಸಮ್ಮೇಳನಕ್ಕೆ, ಕೇಂದ್ರ ಕಾನೂನು ಖಾತೆ ಸಚಿವ ಅರ್ಜುನರಾಮ ಮೇಘವಾಲ್ ಚಾಲನೆ ನೀಡಿದರು. ಹೊಸ ಮೂರು ಅಪರಾಧ ದಮಡ ಸಂಹಿತೆ ಕಾನೂನುಗಳು, ಬರುವ ಜುಲೈ 1 ರಿಂದ ಜಾರಿಗೆ ಬರಲಿದ್ದು, ಈ ಸಮ್ಮೇಳನ, ಮೂರು ಕಾನೂನುಗಳ ಅನುಷ್ಠಾನದ ಪೂರ್ವಭಾವಿ ಸಿದ್ಧತೆಯ ಭಾಗವಾಗಿತ್ತು.

<><><>

ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ, ಡಾಕ್ಟರ್ ಎಲ್.ಮುರುಗನ್ ಮಾತನಾಡಿ, ದೇಶದ ಕಾನೂನುಗಳನ್ನು, ಡಿಜಟಲೀಕೃತ ಸಮಾಜಕ್ಕೆ ಪೂರಕವಾಗಿ ಅಳವಡಿಸುವ, ಉದ್ದೇಶ ಹೊಂದಲಾಗಿದೆ ಎಂದರು.

<><><>

ಕೊಪ್ಪಳ ಜಿಲ್ಲೆ, ಹಿರೇ ಸಿಂಧೋಗಿ ಗ್ರಾಮದ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ, ಪ್ರಬಾರಿ ಮುಖ್ಯ ಶಿಕ್ಷಕ ಆರ್.ಗುರುಸ್ವಾಮಿ, ತಮ್ಮ ಸಂಬಳದಲ್ಲಿ, ಒಂದನೇ ತರಗತಿಗೆ ದಾಖಲಾಗುವ ಮಕ್ಕಳ ಹೆಸರಿನಲ್ಲಿ, ಹತ್ತು ವರ್ಷದ ಅವಧಿಗೆ ಒಂದು ಸಾವಿರ ರೂಪಾಯಿ ನಿಗದಿತ ಠೇವಣಿ ಇಟ್ಟು, ಮಕ್ಕಳ ಕಲಿಕೆಯನ್ನು ಪ್ರೋತ್ಸಾಹಿಸುವ, ಮಾದರಿ ಕಾರ್ಯ ಕೈಗೊಂಡಿದ್ದಾರೆ. ಕಳೆದ ನಾಲ್ಕು ವರ್ಷಗಳಲ್ಲಿ, 25 ಮಕ್ಕಳಿಗೆ ಈ ನಿಶ್ಚಿತ ಠೇವಣಿಯಿಂದ ಲಾಭವಾಗಿದೆ ಎಂದು, ಆರ್. ಗುರುಸ್ವಾಮಿ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಮುಖ್ಯ ಶಿಕ್ಷಕ ಆರ್. ಗುರುಸ್ವಾಮಿ ಧ್ವನಿ 45 ಸೆಕೆಂದುಗಳು

<><><>

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲೂಕಿನ, ಚನ್ನರಾಯಪಟ್ಟಣ ಹೋಬಳಿಯ, ಪಾಪನಹಳ್ಳಿ ಗ್ರಾಮದ, ಕಸ ವಿಂಗಡಣೆ ಘಟಕದಲ್ಲಿ, ಶಾಲೆಯಿಂದ ಹೊರಗುಳಿದ ಒಂಬತ್ತು ಮಕ್ಕಳನ್ನು ಗುರುತಿಸಲಾಗಿದೆ. ಮಕ್ಕಳ ಸಹಾಯವಾಣಿಗೆ ಬಂದ ದೂರಿನ ಹಿನ್ನೆಲೆ, ಈ ಕಾರ್ಯಾಚರಣೆ ಕೈಗೊಳ್ಳಲಾಗಿದೆ. ಮಕ್ಕಳು ಹಾಗೂ ಪಾಲಕರು, ಮೂಲತಃ ಪಶ್ಚಿಮ ಬಂಗಾಳ ಹಾಗೂ ಅಸ್ಸಾಂ ರಾಜ್ಯದವರಾಗಿದ್ದು, ಮಕ್ಕಳ ರಕ್ಷಣಾಧಿಕಾರಿ, ಶಾಲೆಯಿಂದ ಹೊರಗುಳಿದ ಒಂಬತ್ತು ಮಕ್ಕಳನ್ನು, ಬಾಲ ಮಂದಿರಕ್ಕೆ ಹಸ್ತಾಂತರಿಸಿ, ಪುನರ್ ವಸತಿ ಕಲ್ಪಿಸಿದ್ದಾರೆ. ಕಸ ವಿಂಗಡಣಾ ಘಟಕದಲ್ಲಿ, ಕಾರ್ಮಿಕರಿಗೆ ಮೂಲಸೌಕರ್ಯ ಒದಗಿಸುವಂತೆ, ಮಾಲಿಕರಿಗೆ ಸೂಚಿಸಿದ್ದಾಗಿ, ಜಿಲ್ಲಾ ಕಾರ್ಮಿಕ ಅಧಿಕಾರಿ ನಾಗೇಂದ್ರ ಎಚ್.ಆರ್. ತಿಳಿಸಿದ್ದಾರೆ.

<><><>

ಮೈಸೂರಿನ ಜೆ.ಎಸ್.ಎಸ್. ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾದೆಮಿ, 2024 ರ ಹೈಯರ್ ಎಜ್ಯುಕೇಷನ್ ಇಂಪ್ಯಾಕ್ಟ್ ರ್ಯಾಂಕಿಂಗ್, ಸುಸ್ಥಿರ ಅಭಿವೃದ್ಧಿ ಗುರಿಗಳ ವಿಭಾಗದಲ್ಲಿ, ಜಾಗತಿಕವಾಗಿ ಮೊದಲ ರ್ಯಾಂಕ್ ಪಡೆದಿದೆ. ಜೆ.ಎಸ್.ಎಸ್. ಮಹಾ ವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾಕ್ಟರ್ ಸಿ.ಜಿ.ಬೆಟಸೂರಮಠ ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

ಸಿ.ಜಿ.ಬೆಟಸೂರಮಠ ಧ್ವನಿ 30 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ದ್ವಿತೀಯ ಪಿಯುಸಿ–3ನೇ ವಾರ್ಷಿಕ ಪರೀಕ್ಷೆ, ಇಂದಿನಿಂದ ಜುಲೈ 5ರ ವರೆಗೆ ನಡೆಯಲಿದೆ. ರಾಜ್ಯದ 248 ಪರೀಕ್ಷಾ ಕೇಂದ್ರಗಳಲ್ಲಿ, 75 ಸಾವಿರದ 995 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಪಿಯೂಸಿ ದ್ವಿತೀಯ ವರ್ಷದಲ್ಲಿ, ವಾರ್ಷಿಕ ಮೂರು ಪರೀಕ್ಷೆ ಪದ್ಧತಿ ಅನುಸಾರ, ಮೊದಲ ಎರಡು ಪರೀಕ್ಷೆಗಳನ್ನು ನಡೆಸಿ, ಈಗಾಗಲೇ ಫಲಿತಾಂಶ ಪ್ರಕಟಿಸಲಾಗಿದೆ. ವಿದ್ಯಾರ್ಥಿಗಳು ಉತ್ತೀರ್ಣರಾಗಲು ಮತ್ತು ಫಲಿತಾಂಶ ಉತ್ತಮ ಪಡಿಸಿಕೊಳ್ಳಲು, ಮೂರನೇ ಅವಕಾಶ ನೀಡಲಾಗಿದೆ.

<><><>

ರಸ್ತೆ ಅಪಘಾತಗಳಲ್ಲಿ, ಪ್ರತಿ ವರ್ಷ ಲಕ್ಷಾಂತರ ಜನ ಸಾವನ್ನಪ್ಪುತ್ತಿದ್ದಾರೆ. ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು, ಸಾರ್ವಜನಿಕ ಸುರಕ್ಷತೆ ಹಿತದೃಷ್ಟಿಯಿಂದ ಮಾದರಿ ನಡೆ ಎಂದು, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಆಯೋಜಿಸಲಾಗಿದ್ದ, ರಸ್ತೆ ಸುರಕ್ಷತೆ ಅರಿವು ದ್ವಿ ಚಕ್ರ ವಾಹನ ಜಾಥಾಕ್ಕೆ, ರಾಜ್ಯಪಾಲರು ಚಾಲನೆ ನೀಡಿ, ಮಾತನಾಡಿದರು. ಸಂಚಾರ ದಟ್ಟಣೆ, ಅತಿಯಾದ ವೇಗ, ಮೊಬೈಲ್ ಫೋನ್ ಬಳಕೆ, ಕಾನೂನು ನಿಯಮಗಳ ಉಲ್ಲಂಘನೆ, ಅಪಘಾತಗಳಿಗೆ ಕಾರಣ. ಸಂಚಾರ ನಿಯಮ ಪಾಲನೆ ಆದ್ಯತೆಯಾಗಬೇಕು ಎಂದು, ರಾಜ್ಯಪಾಲರು ಅಭಿಪ್ರಾಯಪಟ್ಟರು.

<><><>

ಪರಿಸರದಲ್ಲಿ ಏನೇ ಏರಿಳಿತ, ಅನಾಹುತ ಸಂಭವಿಸಿದರೂ, ಅದಕ್ಕೂ ಮುಂಚೆಯೇ ಸಮುದ್ರ ಅದರ ಸೂಚನೆ ನೀಡುತ್ತದೆ; ಹೀಗಾಗಿ ಸಮುದ್ರವನ್ನು ಅರಿಯುವ ಪ್ರಯತ್ನ ಮಾಡಿದರೆ, ಪರಿಸರದ ಏರಿಳಿತಗಳು ತಿಳಿಯಲಿವೆ ಎಂದು ಕಡಲ ತಜ್ಞ ಪ್ರಕಾಶ್ ಮೇಸ್ತ್ರಾ ನುಡಿದರು. ಉತ್ತರ ಕನ್ನಡ ಜಿಲ್ಲೆ, ಶಿರಸಿಯಲ್ಲಿ ಆಯೋಜಿಸಿದ್ದ, 'ಪರಿಸರ ಸಂರಕ್ಷಣೆ–ಸುಸ್ಥಿರ ಅಭಿವೃದ್ಧಿ' ಕುರಿತ, ರಾಜ್ಯ ಮಟ್ಟದ ಸಮ್ಮೇಳನದಲ್ಲಿ ಅವರು, ವೃಕ್ಷಲಕ್ಷ ಪ್ರಶಸ್ತಿ ಸ್ವೀಕರಿಸಿ, ಮಾತನಾಡಿದರು. ಅನಂತ್ ಹೆಗಡೆ ಆಶೀಸರ ಅವರಿಗೆ ಸಂದ, ಅಭಿನಂದನಾ ಗ್ರಂಥ 'ವೃಕ್ಷಮಿತ್ರ'ವನ್ನು, ಸ್ವರ್ಣವಲ್ಲಿ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಬಿಡುಗಡೆ ಮಾಡಿದರು. ರಾಷ್ಟ್ರೀಯ ವೈದ್ಯಕೀಯ ಆಯೋಗದ ಅಧ್ಯಕ್ಷ ಡಾಕ್ಟರ್ ಬಿ.ಎನ್. ಗಂಗಾಧರ್, ವಿಧಾನ ಪರಿ ’ತ್ ಸದಸ್ಯ ಶಾಂತಾರಾಮ್ ಸಿದ್ದಿ, ದು.ಗು. ಲಕ್ಷ್ಮಣ, ತೇಜಸ್ವಿನಿ ಅನಂತಕುಮಾರ್, ಬಿ.ಎಂ. ಕುಮಾರಸ್ವಾಮಿ ಪಾಲ್ಗೊಂಡಿದ್ದರು.

<><><>

18ನೇ ಲೋಕಸಭೆಯ ಮೊದಲ ಅಧಿವೇಶನ, ಇಂದಿನಿಂದ ಆರಂಭವಾಗಲಿದೆ. ಹಂಗಾಮಿ ಸ್ಪೀಕರ್ ಆಗಿ ನೇಮಕಗೊಂಡಿರುವ, ಬಿಜೆಪಿಯ ಹಿರಿಯ ಸಂಸದ, ಭರ್ತೃಹರಿ ಮಹ್ತಾಬ್ ಅವರು, ಹೊಸದಾಗಿ ಆಯ್ಕೆಯಾದ ಲೋಕಸಭಾ ಸದಸ್ಯರಿಗೆ ಪ್ರಮಾಣ ವಚನ ಬೋಧಿಸಲಿದ್ದಾರೆ. ನೂತನ ಲೋಕಸಭಾ ಸ್ಪೀಕರ್ ಆಯ್ಕೆ ನಾಡಿದ್ದು ಬುಧವಾರ, 26 ರಂದು ನಡೆಯಲಿದೆ.

<><><>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 27 ರಂದು ಲೋಕಸಭೆ ಮತ್ತು ರಾಜ್ಯಸಭೆಯ ಜಂಟಿ ಸದನವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

<><><>

ರಾಜ್ಯಸಭೆ ಅಧಿವೇಶನ ಇದೇ 27ರಂದು ಆರಂಭವಾಗಲಿದೆ. ಜುಲೈ 3 ರಂದು ಸಂಸತ್ ಅಧಿವೇಶನ ಮುಕ್ತಾಯವಾಗಲಿದೆ.

<><><>

ಅಂದಾಜು, ತಲಾ 20 ಲಕ್ಷ ರೂಪಾಯಿ ಮೌಲ್ಯದ, ಓಂಗೋಲ್ ತಳಿಯ ಎತ್ತುಗಳು, ಎರಡೂವರೆ ಟನ್ ಭಾರದ ಕಲ್ಲುಗಳನ್ನು ಎಳೆಯುವ ಮೂಲಕ, ಮೂರು ದಿನಗಳ ಮುನ್ನೂರು ಕಾಪು, ಮುಂಗಾರು ಸಾಂಸ್ಕೃತಿಕ ಹಬ್ಬ, ರಾಯಚೂರಿನಲ್ಲಿ ವಿಜೃಂಭಣೆಯಿಂದ ಸಮಾರೋಪ ಗೊಂಡಿತು. ತೆಲಂಗಾಣ ಹಾಗೂ ಆಂಧ್ರ ಪ್ರದೇಶದಿಂದ, ಭಾರದ ಬಂಡೆಗಳನ್ನು ಎಳೆಯುವ ಕಾರ ಹುಣ್ಣಿಮೆಯ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ, ಆನೆ ಗಾತ್ರದ ಒಂಗೋಲ್ ತಳಿ ಎತ್ತುಗಳನ್ನು ನೋಡಲು ಸಾವಿರಾರು ಜನ ಸಮಾವೇಶಗೊಂಡಿದ್ದರು. ಎ.ಪಾಪಾರೆಡ್ಡಿ ಹಾಗೂ ಬೆಲ್ಲಂ ನರಸರೆಡ್ಡಿ ವಿಜೇತ ತಂಡಗಳಿಗೆ ಬಹುಮಾನ ನೀಡಿ, ಗೌರವಿಸಿದರು.

<><><>

ಸಾಮಾನ್ಯ ವರ್ಗಕ್ಕೆ ಸೇರಿದ ರೈತರಿಗೆ, ಶೇಕಡ 50ರ ಸಬ್ಸಿಡಿ ದರದಲ್ಲಿ, 39 ಲಕ್ಷ 88 ಸಾವಿರ ರೂಪಾಯಿ ಹಾಗೂ ಪರಿಶಿ ್ಟ ಜಾತಿ ಮತ್ತು ಪರಿಶಿ ್ಟ ಪಂಗಡಕ್ಕೆ ಸೇರಿದ ರೈತರಿಗೆ, ಶೇಕಡ 70 ರ ಸಬ್ಸಿಡಿ ದರದಲ್ಲಿ, 50 ಲಕ್ಷ ರೂಪಾಯಿ ಸಹಾಯ ಧನ ನೀಡಲಾಗಿದೆ ಎಂದು, ವೈದ್ಯಕೀಯ ಶಿಕ್ಷಣ ಖಾತೆ ಸಚಿವ ಡಾಕ್ಟರ್ ಶರಣ ಪ್ರಕಾಶ್ ಪಾಟೀಲ ತಿಳಿಸಿದ್ದಾರೆ. ಕಲಬುರಗಿ ಜಿಲ್ಲೆಯ 6 ಜನ ಕಬ್ಬು ಬೆಳೆಗಾರರಿಗೆ, 'ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆ' ಅಡಿ, 259 ಲಕ್ಷ 52 ಸಾವಿರ ರೂಪಾಯಿ ಮೌಲ್ಯದ, ಕಬ್ಬು ಕತ್ತರಿಸುವ ಯಂತ್ರಗಳನ್ನು, ಸಬ್ಸಿಡಿ ದರದಲ್ಲಿ ವಿತರಿಸಿ, ಮಾತನಾಡಿದರು.

<><><>

ಕೊಡಗು ಜಿಲ್ಲೆಯ, ಅರವತ್ತ ಒಕ್ಲು ಗ್ರಾಮದಲ್ಲಿ, ಕಾಡಾನೆಯೊಂದು ವಿದ್ಯುತ್ ತಂತಿ ತಗುಲಿ, ಸಾವಿಗೀಡಾಗಿದೆ. ಅಂದಾಜು 10 ವ ್ಷ ಪ್ರಾಯದ ಆನೆ ಎಂದು, ಅರಣ್ಯ ಇಲಾಖೆ ತಿಳಿಸಿದೆ. ಕಳೆದ ಎರಡು ದಿನಗಳಲ್ಲಿ, ಕಾಡಾನೆ ಸಾವಿನ ಮೂರನೇ ಪ್ರಕರಣ ವರದಿಯಾಗಿದೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಆಕಾಶವಾಣಿಯ ಜನಪ್ರಿಯ 'ಮನ್ ಕಿ ಬಾತ್'ನ 111 ನೇ ಸಂಚಿಕೆಯಲ್ಲಿ, ದೇಶ, ವಿದೇಶಗಳ ಜನತೆಯೊಂದಿಗೆ, ತಮ್ಮ ಮನದ ಮಾತನ್ನು ಹಂಚಿಕೊಳ್ಳಲಿದ್ದಾರೆ. ಭಾನುವಾರ, 30ನೇ ತಾರೀಖು ಪ್ರಸಾರವಾಗಲಿರುವ, ಮನದ ಮಾತಿಗೆ, ಟೋಲ್ ಫ್ರೀ ಸಂಖ್ಯೆ 1800–11–70800, ನಮೋ ಆ್ಯಪ್ ಅಥವಾ ಮೈ ಜಿ.ಒ.ವಿ ಡಾಟ್ ಇನ್ ಮೂಲಕ, ಇದೇ 28ರ ವರೆಗೆ ಜನತೆ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಬಹುದು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಮಾತೇಶ್ವರಿ ಜಗದಂಬಾ ಸರಸ್ವತಿ ಅವರ, 59ನೇ ಪುಣ್ಯತಿಥಿಯಾದ ಇಂದು, ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಎಂಟೂವರೆ ಸಾವಿರ ಸೇವಾ ಕೇಂದ್ರಗಳಲ್ಲಿ, ಶಕ್ತಿ ದಿನವನ್ನು ಆಚರಿಸಲಾಗುತ್ತಿದೆ.

<><><>

ಜನ ಸಂಘದ ಸಂಸ್ಥಾಪಕ ಜಗನ್ನಾಥರಾವ್ ಜೋಶಿ ಅವರ ಜಯಂತಿ ಮತ್ತು ಡಾಕ್ಟರ್ ಶ್ಯಾಮ ಪ್ರಸಾದ್ ಮುಖರ್ಜಿ ಅವರ ಬಲಿದಾನ ದಿನದ ಹಿನ್ನೆಲೆ, ಗೌರವಾರ್ಪಣೆ ಕೈಗೊಂಡ, ವರದಿಗಳು ಬಂದಿವೆ.

<><><>

ಧಾರವಾಡ ಜಿಲ್ಲಾಧಿಕಾರಿ ದಿವ್ಯಾ ಪ್ರಭು, ಇಂದು ಬೆಳಗ್ಗೆ 11 ಗಂಟೆಗೆ, ಕುಂದಗೋಳ ಪಟ್ಟಣದ ಸವಾಯಿ ಗಂಧರ್ವ ಸಭಾಭವನದಲ್ಲಿ ತಾಲೂಕು ಮಟ್ಟದ ಜನಸ್ಪಂದನದಲ್ಲಿ ಪಾಲ್ಗೊಳ್ಳಲಿದ್ದಾರೆ.

<><><>

ಮುಂಬೈ–ಹುಬ್ಬಳ್ಳಿ ಮಧ್ಯದ ವಿಮಾನ ಸಂಚಾರ ಸೇವೆ, ಜುಲೈ 15 ರಿಂದ ಪುನಾರಂಭಿಸಲಾಗುತ್ತಿದೆ ಎಂದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಇಸ್ರೋ ನಿರ್ಮಿತ, ಮರುಬಳಕೆ ಉಡ್ಡಯನ ವಾಹಕ, ‘ಪುಷ್ಪಕ್’ ಲ್ಯಾಂಡಿಂಗ್ ಪರೀಕ್ಷೆ ಯಶಸ್ವಿ.
- ಸಾರ್ವಜನಿಕ ಹಿತದೃಷ್ಟಿಯಿಂದ, ಸಂಚಾರ ನಿಯಮ ಪಾಲನೆ ಆದ್ಯತೆಯಾಗಬೇಕು – ರಾಜ್ಯಪಾಲ ಥಾವರಚಂದ್ ಗೆಹ್ಲೋಟ್.
- ಸಮುದ್ರವನ್ನು ಅರಿಯುವುದರಿಂದ, ಪರಿಸರದ ಏರಿಳಿತಗಳು ತಿಳಿಯುವವು – ಕಡಲ ತಜ್ಞ ಪ್ರಕಾಶ್ ಮೇಸ್ತಾ.
- 18ನೇ ಲೋಕಸಭೆಯ ಮೊದಲ ಅಧಿವೇಶನ, ಇಂದಿನಿಂದ ಆರಂಭ; 27ರಂದು ಉಭಯ ಸದನಗಳನ್ನುದ್ದೇಶಿಸಿ, ರಾಷ್ಟ್ರಪತಿ ಭಾಷಣ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>